ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 105.

ಮೃತಪಟ್ಟ ಶಂಕರಪ್ಪಶಟ್ಟಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ತೆ ಮಲ್ಲಪ್ಪಶೆಟ್ಟಿಯು ಮೃತಪಟ್ಟ ಸದರೀ ಶಂಕರಪ್ಪಶಟ್ಟಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಕರ್ತಿಕೆರೇ ಸ್ಥಳದ ಮಲ್ಲಪ್ಪಶಟ್ಟಿಯು ಸದರೀ ಕರ್ತಿಕೆರೇ ವಾಸಸ್ಥನಾಗಿ ಮೃತಪಟ್ಟ ಶಂಕರಪ್ಪಶಟ್ಟಿಯ ಜಿಂದಗೀ ಬಗ್ಯಾಗಿ ಬರತಕ್ಕ (1,000) ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಶಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಪ್ಪಶಟ್ಟಿಯ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 19ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಂಕರಪ್ಪಶಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ಲಿಖಿಯಪಡಿಸಿ ಯಿದೆ.

ಸ್ ೧೮೮೭ನೇ ಇಸವಿ ಅಕ್ಟೋಬರ್ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮದಸ್ತಖತ್ತೊಡನೇ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 21ನೇ ಅಕ್ಟೋಬರ್ ೧೮೮೭.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದು ಮಾಡಲ್ಪಟ್ಟ ಕಾಫೀ ಜಮೀನ್ ಮೇಲಿನ ಕಂದಾಯ್ದ ಬಾಕೀ ತಹಲ್ ವರಿಗೂ ಪಾವತೀ ಮಾಡಲ್ಪಟ್ಟಿರುವದಿಲ್ಲವಾದ್ದರಿಂದ ಸದರೀ ಜಮೀನ್ ಸ್ ೧೮೮೭ನೇ ಇಸವಿ ಡಿಸಂಬರ್ 19ನೇ ತಾರೀಖಿನಲ್ಲಿ ಚಿಕ್ಕಮಗಳೂರು ತಾ|| ಕಚೇರಿ ಬಳಿ ಮಾಮೂಲ್ ಷರ್ತುಗಳಿಗೆ ಒಳಪಡಿಸಿ ಬಹಿರಂಗವಾಗಿ ಕ್ರಮವಾಗಿ ಹರಾಜ್ ಹಾಕಲ್ಪಡುವದು.

ಸರ್ವೇ ನಂಬರು.	ಖಾತೇದಾರನ ಹೆಸರು.	ತಾಲ್ಲೂಕು ಮತ್ತು ಗ್ರಾಮ.	ವಿಸ್ತೀರ್ಣ, ಎಕರೆ.	ಕಂದಾಯ.	ಬಾಕೀ ಮೊಬಲಗು. 1886—87	ಜುಮ್ಮಾ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಷರತ್ತು.
1	ಮಾ|| ಜೆ. ಜಬ್ಲಿಯೂ ಎಸ್ಸ್. ಸೌಸ್ನ್ ಸಾಹೇಬರು	ಚಿಕ್ಕಮಗಳೂರು ತಾ|| ಹೊರಬಿದ್ದಿ ಕ್ಯಾಲು ಗ್ರಾಮ	150 0	127 8 0 ಲೋಕಲ್ ಸೆಸ್ 7 15 6 ನೋಟೀಸ್ ಫೀ 1 0 0	127 8 0 7 15 6 1 0 0 136 7 6	ಸಹಿತವಾಗಿ ಹರಾಜ್ ಹಾಕಲ್ಪಡುವದು.	ಪತ್ತಾಪ್ರಯ ಫೀಜಿನ ಸರಹದ್ದು ಮತ್ತು ಹಳಿಕೆಳ್ಗೆ ಹೋಗುವ ರಸ್ತೆ	ದಾನಪರಹಳ್ಳಿ ಸರಹದ್ದು ಮತ್ತು ಹೊರಬಿದ್ದಿ ಕ್ಯಾಲು ಗ್ರಾಮದ ಸರ್ವೇ ನಂ. 2	ತೋಟದಹಳ್ಳಿ ಸರಹದ್ದು ಮತ್ತು ಬಾಬಾಬುಡನ್ ಪರ್ವತಕ್ಕೆ ಹೋಗುವ ರಸ್ತೆ	ನೋಟೀಸ್ ಜಾರೀ ಆಗಿ ಇದೆ.

ಜೆ. ಎ. ಕ್ಯಾಮಲ್,
ಡೆಪ್ಯೂಟಿ ಕಮ್ಮಿಷನರ್.